ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ, ಹೂಡಿ ಉಪವಿಭಾಗ, ಬೆಂಗಳೂರು-48.

ದಿನಾಂಕ:19-12-2020

Ref no - 08/2020

# ವಾರ್ಡ್-85ರ ವಾರ್ಡ್ ಸಮಿತಿ ಸಭೆ

## *ಸಭೆಯ ನಡವಳಿಗಳು*

ವಿಷಯ:- ಮಾನ್ಯ ಆಯುಕ್ತರು ಬಿಬಿಎಂಪಿ ರವರ ಆದೇಶ ಸಂಖ್ಯೆ:ಬಿ12(5)ಪಿ.ಆರ್/35/2020-21 ದಿನಾಂಕ:21-09-2020 ರವರ ಆದೇಶದಂತೆ ದಿನಾಂಕ:19-12-2020 ರಂದು ವಾರ್ಡ್ ನಂ.85 ರ ಎ.ಇ.ಸಿ.ಎಸ್ ಬಡಾವಣೆ, ವಾರ್ಡ್ ಕಛೇರಿಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು.

<u>ಸಭೆಗೆ ಹಾಜರಾಗಿದ್ದವರ ವಿವರಗಳು:</u>

| ಕ್ರ ಸಂ | ಹೆಸರು ಶ್ರೀಮತಿ/ಶ್ರೀ | ಪದನಾಮ |
|---|---|---|
| 1 | ಶ್ರೀ.ಡಾ॥ಸುರೇಶ್ | ನೋಡಲ್ ಅಧಿಕಾರಿ ಹಾಗೂ ಅಧ್ಯಕ್ಷರು |
| 2 | ಶ್ರೀ.ಎನ್.ವೆಂಕಟೇಶ್ | ಕಾರ್ಯದರ್ಶಿ |
| 3 | ಶ್ರೀ.ಜಿ.ಎನ್.ವೆಂಕಟೇಶ್ | ಅದ್ಯಕ್ಷಕರು, ಎ.ಇ.ಸಿ.ಎಸ್ ಬಡಾವಣೆ |
| 4 | ಸಿ.ಟಿ.ಮಲ್ಲೇಶ್ | ಸದಸ್ಯರು |
| 5 | ಶ್ರೀ.ರವೀಂದ್ರ | BWSSB |
| 6 | ಶ್ರೀ.ಟಿ.ರಾಮು | RWA |
| 7 | ಶ್ರೀನಿವಾಸನ್ | RWA |
| 8 | ಶ್ರೀ.ದಿವಾಕರ್ | RWA |
| 9 | ಶ್ರೀ.ನಂದಕುಮಾರ್.ಟಿ | RWA |
| 10 | ಶ್ರೀ.ಜಗದೀಶ್ | ಬಿಬಿಎಂಪಿ,ವಿದ್ಯುತ್ ಶಾಖೆ |
| 11 | ಮುರಳಿಮನಿ | RWA |
| 12 | ಶ್ರೀ.ಕೆ.ಎ.ರಘುರಾಮ್ ಪ್ರಸಾದ್ | RWA |
| 13 | ಶ್ರೀ.ಬೋರೆಗೌಡ್ರು | ಗುತ್ತಿಗೆದಾರರು, ಎ.ಇ.ಸಿ.ಎಸ್ ಬಡಾವಣೆ |
| 14 | ಶ್ರೀ.ರಘನಂದನ್ | ಕಿರಿಯ ಆರೋಗ್ಯ ಪರಿವೀಕ್ಷಕರು |
| 15 | ಶ್ರೀ.ರವಿಚಂದ್ರನ್ | ಸಹಾಯಕ ಅಭಿಯಂತರರು ಬೃಹತ್ ರಸ್ತೆಗಳು |
| 16 | ಶ್ರೀಮತಿ.ಪೂರ್ಣಿಮ ಕಲ್ಮಟ್ | RWA |
| 17 | ಶ್ರೀ.ಹೆಚ್.ವೆಂಕಟೇಶ್ | RWA |
| 18 | ಶ್ರೀಮತಿ.ರೇಖಾ.ಎಂ | RWA |
| 19 | ಶ್ರೀ.ರಾಜೀವ್ ಅಗರವಾಲ್ | RWA |
| 20 | ಶ್ರೀ.ಸುಂದರ್‌ನಾಥ್ | RWA |

Scanned with CamScanner

ಶ್ರೀ.ಡಾ॥ಸುರೇಶ್.ಆರ್., ನೋಡಲ್ ಅಧಿಕಾರಿ ಹಾಗೂ ಅಧ್ಯಕ್ಷಕರು ಸಭೆಯಲ್ಲಿ ಹಾಜರಿದ್ದ ಅಧ್ಯಕ್ಷರು ಹಾಗೂ ಶ್ರೀ.ಎಸ್.ವೆಂಕಟೇಶ್, ಕಾರ್ಯದರ್ಶಿ ಬಡಾವಣೆಗಳ ಸಂಘ ಸಂಸ್ಥೆರವರು ಹಾಗೂ ಉಪಸ್ಥಿತರಿದ್ದ ಎಲ್ಲಾ ಅಧಿಕಾರಿರವರುಗಳಿಗೆ ಸ್ವಾಗತ ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು.

1. ಸಭೆಯಲ್ಲಿ ದಿನಾಂಕ:05-12-2020 ರಂದು ನಡೆದ ನಡುವಳಿಗಳನ್ನು ಅಧ್ಯಕ್ಷಕರು ಹಾಗೂ ನೋಡಲ್ ಅಧಿಕಾರಿ ಡಾ॥ಸುರೇಶ್ ರವರು ವಿವರಿಸಿದರು.
2. ಸಭೆಯಲ್ಲಿ ಶ್ರೀಮತಿ. ರೇಖಾ.ಎಂ ರವರು ಬಿಬಿಎಂಪಿ ಆರೋಗ್ಯ ಇಲಾಖೆಯಲ್ಲಿ ಕಸವನ್ನು ತುಂಬಿಸಿ ಶೀಘ್ರವಾಗಿ ಕಾರ್ಯನಿರ್ವಹಿಸಲು ಪುಶ್‌ಕಾರ್ಟ್‌ಗಳು ಅವಶ್ಯಕತೆಯಿರುವುದೆಂದು ಕೋರಿದರು. ಸದರಿ ವಿಷಯಕ್ಕೆ ಶ್ರೀ.ರಘುನಂದನ್, ಕಿರಿಯ ಆರೋಗ್ಯ ಪರಿವೀಕ್ಷಕರು ರವರು ಹಿಂದಿನ ನಡುವಳಿಕೆಯಲ್ಲಿ ಈಗಾಗಲೇ ಮಾಹಿತಿಯನ್ನು ಮೇಲಾಧಿಕಾರಿಯವರಿಗೆ ಸಲ್ಲಿಸಲಾಗಿರುವುದೆಂದು ಹಾಗೂ ಅನುಮತಿ ದೊರೆತಾಗ ಪುಶ್‌ಕಾರ್ಟ್‌ಗಳನ್ನು ಟೆಂಡರ್ ಮುಖಾಂತರ ಅಳವಡಿಸಲು ಕ್ರಮಕೈಗೊಳ್ಳಲು ತಿಳಿಸಿದರು.
3. ಎ.ಇ.ಸಿ.ಎಸ್.ಬಡಾವಣೆಯ ಅಧ್ಯಕ್ಷರು, ಶ್ರೀ.ವೆಂಕಟೇಶ್ ರವರು ಆರೋಗ್ಯ ಇಲಾಖೆಯಲ್ಲಿ ವಾರ್ಡ್ ನಂ.85ಕ್ಕೆ ಸಂಬಂಧಿಸಿದಂತೆ ಪೌರಕಾರ್ಮಿಕರನ್ನು 223ಕ್ಕೆ ಏರಿಸಲು ಕೋರಿದರು. ಸದರಿ ವಿಷಯಕ್ಕೆ ಶ್ರೀ.ರಘುನಂದನ್, ಕಿರಿಯ ಆರೋಗ್ಯ ಪರಿವೀಕ್ಷಕರು ರವರು ಪ್ರಸ್ತುತ 90 ಪೌರಕಾರ್ಮಿಕರು ವಾರ್ಡ್ ನಂ.85 ರಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಬಾಕಿಯಿರುವ ಪೌರಕಾರ್ಮಿಕರನ್ನು ನೇಮಿಸಿಕೊಳ್ಳಲು ಕಡತವನ್ನು ಮೇಲಾಧಿಕಾರಿಗಳಿಗೆ ಸಲ್ಲಿಸಲಾಗಿದೆ ಎಂದು ತಿಳಿಸಿದರು.
4. ಸಭೆಯಲ್ಲಿ ಎ.ಇ.ಸಿ.ಎಸ್.ಬಡಾವಣೆಯ ಅಧ್ಯಕ್ಷರು, ಶ್ರೀ.ವೆಂಕಟೇಶ್ ರವರು ಫುಟ್‌ಪಾತ್ ತೆರವು ಕಾರ್ಯಕ್ರಮವನ್ನು ಅತೀ ಶೀಘ್ರದಲ್ಲೇ ಹಮ್ಮಿಕೊಳ್ಳಲು ಕೋರಿದರು. ಸದರಿ ವಿಷಯಕ್ಕೆ ಸಬಂಧಿಸಿದಂತೆ ಶ್ರೀ.ವೆಂಕಟೇಶ್, ಕಾರ್ಯದರ್ಶಿ ಹಾಗೂ ಶ್ರೀ.ರಘುನಂದನ್, ಕಿರಿಯ ಆರೋಗ್ಯ ಪರಿವೀಕ್ಷಕರು ರವರು ಜಂಟಿಯಾಗಿ ದಿನಾಂಕ:29-12-2020 ರಂದು ಕೈಗೊಳ್ಳಲಾಗುವುದೆಂದು ತಿಳಿಸಿದರು.
5. ಸಭೆಯಲ್ಲಿ ಶ್ರೀ.ಚಂದ್ರಾರೆಡ್ಡಿ ರವರು ದೂರವಾಣಿಯ ಮುಖಾಂತರ ಗೇಲ್ ಗ್ಯಾಸ್ ಅಗದಿರುವ ರಸ್ತೆಯನ್ನು ಶೀಘ್ರವೇ ಮರು ಸ್ಥಾಪಿಸಲು ಕೋರಿದರು. ಸದರಿ ವಿಷಯಕ್ಕೆ ಗೇಲ್‌ಗ್ಯಾಸ್ ಗುತ್ತಿಗೆದಾರರ ಮುಖ್ಯಸ್ಥರು ಶ್ರೀ.ಇಂದ್ರಜೀತ್ ಮೀನಾ ರವರು ಮೊದಲು ದೊಡ್ಡನೆಕ್ಕುಂದಿಯನ್ನು ಆಧ್ಯತೆ ಮೇರೆಗೆ ಕಾರ್ಯನಿರ್ವಹಿಸಿದ ನಂತರ ಉಳಿದ ಭಾಗಗಳಲ್ಲಿ ನಿರ್ವಹಿಸುವುದೆಂದು ದೂರವಾಣಿ ಮುಖಾಂತರ ತಿಳಿಸಿದರು. ಸದರಿ ವಿಷಯನ್ನು ಅಧ್ಯಕ್ಷರು ಸಭೆಯಲ್ಲಿ ಘೋಷಿಸಿದರು.
6. ಸಭೆಯಲ್ಲಿ ಶ್ರೀಮತಿ.ಪೂರ್ಣಿಮ ಕಲ್ಮೆಟ್ ರವರು ಎ.ಇ.ಸಿ.ಎಸ್ ಬಡಾವಣೆಯಲ್ಲಿ ಕಾಮಗಾರಿಯನ್ನು ಪ್ರಾರಂಭಿಸುವ ದಿನವನ್ನು ತಿಳಿಸಬೇಕೆಂದು ಕೋರಿದರು. ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಶ್ರೀ.ಬೋರೆಗೌಡ್ರು, ಗುತ್ತಿಗೆದಾರರು ರವರು ದಿನಾಂಕ:21-12-2020 ರಂದು ಪ್ರಾರಂಭಿಸುವುದಾಗಿ ಹಾಗೂ ದಿನಾಂಕ:22-12-2020 ರಂದು ಗ್ರಾಮ ಪಂಚಾಯಿತಿ ಚುನಾವಣೆ ಇರುವುದರಿಂದ ಕೂಲಿ ಕಾರ್ಮಿಕರಿಗೆ ಮತ ಚಲಾಯಿಸಲು ಕೆಲವು ದಿನಗಳ ರಜೆಯನ್ನು ನೀಡಬೇಕೆಂದು ಹಾಗೂ ದಿನಾಂಕ:28-12-2020 ರಿಂದ ಪೂರ್ಣ ಪ್ರಗತಿಯಲ್ಲಿ ಕಾಮಗಾರಿಯು ನಡೆಯುವುದೆಂದು ತಿಳಿಸಿದರು.
7. ಎ.ಇ.ಸಿ.ಎಸ್.ಬಡಾವಣೆಯ ಅಧ್ಯಕ್ಷರು, ಶ್ರೀ.ವೆಂಕಟೇಶ್ ರವರು ಎ.ಇ.ಸಿ.ಎಸ್ ಬಡಾವಣೆಯ 60 ಅಡಿಯ ಮುಖ್ಯ ರಸ್ತೆಗೆ ಕೇಶವನ್ ಬಿಲ್ಡಿಂಗ್ ಮುಂಭಾಗದಲ್ಲಿ ಚರಂಡಿಯ ರಸ್ತೆ ಕಡೆಯಿರುವ ಗೋಡೆಯನ್ನು ಸರಿಪಡಿಸಿಕೊಡಬೇಕೆಂದು ಕೋರಿರುವ ಮೇರೆಗೆ ಶ್ರೀ.ರವಿಚಂದ್ರನ್, ಸಹಾಯಕ ಅಭಿಯಂತರರು ರವರು ಪ್ರಸ್ತುತ ಕಟ್ಟಡದ ಮಾಲೀಕರು ಕೇಶವನ್ ರವರು ಇಲಾಖೆಯ ಜೊತೆಯಲ್ಲಿ ಸಹಾಕರಿಸುತ್ತಿದ್ದು, ಕಾಮಗಾರಿಯನ್ನು ನಿರ್ವಹಿಸಲು ಯಾವುದೇ ಅಡೆತಡೆ ಇರುವುದಿಲ್ಲವೆಂದು ಹಾಗೂ ಅತೀ ಶೀಘ್ರದಲ್ಲೇ ಪೂರ್ಣಗೊಳಿಸುವುದಾಗಿ ತಿಳಿಸಿದರು.

Scanned with CamScanner

8. ಎ.ಇ.ಸಿ.ಎಸ್.ಬಡಾವಣೆಯ ಕಾರ್ಯದರ್ಶಿಗಳು, ವೆಂಕಟೇಶ್ ರವರು ಎ.ಇ.ಸಿ.ಎಸ್.ಬಡಾವಣೆಯ 60 ಅಡಿ ಮುಖ್ಯ ರಸ್ತೆಯಲ್ಲಿ ವಿದ್ಯುತ್‌ಚಕ್ತಿ ಕಂಬಗಳನ್ನು ಶೀಘ್ರದಲ್ಲೇ ಸ್ಥಳಾಂತರಿಸಲು ಕೋರಿರುವ ಹಿನ್ನೆಲೆಯಲ್ಲಿ ಶ್ರೀ.ರವಿಚಂದ್ರನ್, ಸಹಾಯಕ ಅಭಿಯಂತರರು ರವರು ಸದರಿ ವಿಷಯದ ಬಗ್ಗೆ ಕಡತವನ್ನು ಮೇಲಾಧಿಕಾರಿಗಳಿಗೆ ಸಲ್ಲಿಸಲಾಗಿದ್ದು, ಅನುಮೋದನೆ ಪಡೆದ ನಂತರ ಶೀಘ್ರದಲ್ಲೇ ಕಾರ್ಯವನ್ನು ಹಮ್ಮಿಕೊಳ್ಳಲಾಗುವುದೆಂದು ತಿಳಿಸದರು.

9. ಎ.ಇ.ಸಿ.ಎಸ್.ಬಡಾವಣೆಯ ಮುಕಂದನ್, ರವರು ನಂ.742, 1ನೇ ಮುಖ್ಯ ರಸ್ತೆ, ಸಿ ಬ್ಲಾಕ್ ರವರು ಒಣಗಿದ ಎಲೆಗಳು ರಸ್ತೆಯಲ್ಲಿ ಎತ್ತೇಚವಾಗಿ ಬಿದ್ದಿರುವುದರಿಂದ ಶೀಘ್ರವೇ ಸದರಿ ಕಸವನ್ನು ತೆರವುಗೊಳಿಸಬೇಕೆಂದು ಕೋರಿದರು. ಸದರಿ ವಿಷಯಕ್ಕೆ ಶ್ರೀ.ರಘುನಂದನ್, ಕಿರಿಯ ಆರೋಗ್ಯ ಪರಿವೀಕ್ಷಕರು ರವರು ಕೂಡಲೇ ರಸ್ತೆಯಲ್ಲಿ ಬಿದ್ದಿರುವ ಎಲೆಗಳನ್ನು ತೆರವುಗೊಳಿಸುವುದಾಗಿ ತಿಳಿಸಿದರು.

10. ಎ.ಇ.ಸಿ.ಎಸ್.ಬಡಾವಣೆಯ ಶ್ರೀ.ರಘರಾಮ್ ಪ್ರಸಾದ್ ರವರು ಆಟದ ಪಿಠೋಪಕರಣಗಳನ್ನು ಅತೀ ಶೀಘ್ರವಾಗಿ ಮೈದಾನದಲ್ಲಿ ಅಳವಡಿಸಲು ಕೋರಿರುವ ಹಿನ್ನೆಲೆಯಲ್ಲಿ ವಿಷಯಕ್ಕೆ ಸಂಬಂಧಿಸಿದಂತೆ, ಸಹಾಯಕ ಅಭಿಯಂತರರು ಮೊದಲ ಆದ್ಯಾತೆಯಾಗಿ ಕಾಮಗಾರಿಯನ್ನು ಪ್ರಾರಂಭಿಸಿ ಪೂರ್ಣಗೊಳಿಸುವುದಾಗಿ ತಿಳಿಸಿದರು.

11. ಈ ಮೇಲ್ಕಂಡ ಅಂಶಗಳನ್ನು ಆದ್ಯತೆ ಮೇರೆಗೆ ನಿರ್ವಹಿಸಲು ಅಧ್ಯಕ್ಷರು ಸೂಚಿಸಿದರು ಹಾಗೂ ಸಭೆಯನ್ನು ಮುಕ್ತಾಯಗೊಳಿಸಿದರು.

19/12/2020

ಕಾರ್ಯದರ್ಶಿ
ವಾರ್ಡ್ ನಂ.85

ನೋಡಲ್ ಅಧಿಕಾರಿ ಹಾಗೂ ವಾರ್ಡ್ ಕಮಿಟಿ ಅಧ್ಯಕ್ಷರು
ವಾರ್ಡ್ ನಂ.85

Scanned with CamScanner